ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ:ಸ.ಶಿ.ಅ/ಹೆ.ಮ.ಶಿ/ಕೆಜಿಬಿವಿ/2013–14 ದಿನಾಂಕ: 23.01.2014

# <u>ಸುತ್ತೋಲೆ</u>

**<u>ತುರ್ತುಕ್ರಮಕ್ಕಾಗಿ</u>**

**ವಿಷಯ:** ರಾಷ್ಟ್ರೀಯಕೆ.ಜಿ.ಬಿ.ವಿ ಮೌಲ್ಯಮಾಪನತಂಡದವರದಿಯಆಧಾರದ ಮೇಲೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** 1) ಎಂ.ಹೆಚ್.ಆರ್.ಡಿ ಪತ್ರ ಸಂಖ್ಯೆF.NO.21-7/2013-EE-8 ದಿನಾಂಕ:23.12.2013
2) ಎಂ.ಹೆಚ್.ಆರ್.ಡಿರಾಷ್ಟ್ರೀಯಕೆ.ಜಿ.ಬಿ.ವಿ ಮೌಲ್ಯಮಾಪನಅಧ್ಯಯನತಂಡದಅಂತಿಮ ವರದಿ ನವೆಂಬರ್–ಡಿಸೆಂಬರ್ 2013

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಭಾರತಸರ್ಕಾರವು ಎಂ.ಹೆಚ್.ಆರ್.ಡಿವತಿಯಿಂದ 2013ರ ನವೆಂಬರ್–ಡಿಸೆಂಬರ್‌ರಲ್ಲಿಕರ್ನಾಟಕದಗುಲ್ಬರ್ಗ ಮತ್ತುರಾಯಚೂರುಜಿಲ್ಲೆಯಆಯ್ದ ಮೂರು ಕೆ.ಜಿ.ಬಿ.ವಿಗಳಿಗೆ ಇಬ್ಬರುರಾಷ್ಟ್ರೀಯತಂಡದ ಸದಸ್ಯರುಎರಡು ದಿನಗಳ ಕಾಲ ಭೇಟಿ ನೀಡಿ ಮೌಲ್ಯಮಾಪನ ವರದಿಯನ್ನು ನೀಡಿರುತ್ತಾರೆ(ವರದಿ www.ssa.nic.in ನಲ್ಲಿ ಲಭ್ಯವಿದೆ). ಈ ಮೌಲ್ಯಮಾಪನದ ಪ್ರಮುಖಉದ್ದೇಶಕಸ್ತೂರಬಾಗಾಂಧಿ ವಿದ್ಯಾಲಯಗಳ ಸ್ಥಾಪನೆಯಉದ್ದೇಶ, ಗುರಿಗಳ ಸಫಲತೆ ಬಗ್ಗೆ ಹಾಗೂ ಎಂ.ಹೆಚ್.ಆರ್.ಡಿಗೈಡ್‌ಲೈನ್ಸ್ ಪ್ರಕಾರ ಕೆ.ಜಿ.ಬಿ.ವಿಗಳಲ್ಲಿ ಅನುಪಾಲನೆ ಮಾಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ ಅಧ್ಯಯನ ಮಾಡುವುದಾಗಿತ್ತು. ಈ ತಂಡದಅಧ್ಯಯನ ವರದಿ ಆಧಾರದ ಮೇಲೆ ಉಲ್ಲೇಖ(1)ರಂತೆತುರ್ತು ಕ್ರಮಗಳನ್ನು ಜಿಲ್ಲಾ / ಬ್ಲಾಕ್ / ಕೆ.ಜಿ.ಬಿ.ವಿ ಹಂತಗಳಲ್ಲಿ ಕೈಗೊಳ್ಳಲು ಈ ಕೆಳಕಂಡಂತೆ ಸೂಚಿಸಿದೆ.

1. **ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳು**

- ಕೆ.ಜಿ.ಬಿ.ವಿ ರಾಷ್ಟ್ರೀಯ ಮೌಲ್ಯಮಾಪನತಂಡದ ವರದಿಯಆಧಾರದಂತೆ, ಮೂಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಮಂಚಗಳು, ವಿದ್ಯುತ್‌ಸೌಲಭ್ಯಗಳನ್ನು ಕೆ.ಜಿ.ಬಿ.ವಿಗಳಲ್ಲಿ ಸಮರ್ಪಕವಾಗಿ ಮತ್ತುಏಕರೀತಿಯಲ್ಲಿ ಒದಗಿಸಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಅಲ್ಲದೆ ಶೌಚಾಲಯಗಳ / ಸ್ನಾನಗೃಹಗಳ ಸೌಲಭ್ಯದಕೊರತೆ ಹಾಗೂ ನಿರ್ವಹಣೆಯಕೊರತೆಇರುವ ಬಗ್ಗೆಯು ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಈ ಕೂಡಲೇಎಲ್ಲಾ ಕೆ.ಜಿ.ಬಿ.ವಿಗಳಲ್ಲಿ ಲಭ್ಯವಿರುವ ಅನುದಾನಗಳನ್ನು ಸಮರ್ಪಕವಾಗಿ ಪೂರ್ಣಪ್ರಮಾಣದಲ್ಲಿ ನಿಯಮಾನುಸಾರ ಉಪಯೋಗಿಸಿಕೊಂಡು ಸದರಿ ಸೌಲಭ್ಯಗಳನ್ನು ಸಮರೋಪಾದಿಯಲ್ಲಿಒದಗಿಸುವುದು.
- ಎಲ್ಲಾ ವಿದ್ಯಾರ್ಥಿಗಳಿಗೂ 3 ವರ್ಷಗಳಿಗೆ ಒಂದು ಬಾರಿ ಹಾಸಿಗೆ, ಹೊದಿಕೆಗಳನ್ನು ಕಡ್ಡಾಯವಾಗಿಒದಗಿಸಲುಕ್ರಮ ಕೈಗೊಳ್ಳುವುದು (ವಾರ್ಷಿಕಕ್ರಿಯಾಯೋಜನೆಯಲ್ಲಿಅಗತ್ಯ ಪ್ರಸ್ತಾವನೆ ಸಲ್ಲಿಸುವುದು)
- ಹಾಸಿಗೆ, ಹೊದಿಕೆಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ಶುಭ್ರತೆಯನ್ನುಕಾಪಾಡುವುದು.
- ಜಿಲ್ಲಾ / ಬ್ಲಾಕ್ ಹಂತದಲ್ಲಿಇತರೆ ಇಲಾಖೆಗಳೊಂದಿಗೆ (ಉದಾ: NRHM, MGNREGA, SABALA, RMSA, WCD, ZP, TP, GP etc.)ಸದರಿ ಮೂಲಭೂತ ಸೌಕರ್ಯಗಳನ್ನು ಹಾಗೂ ಸೌಲಭ್ಯಗಳನ್ನು ಒದಗಿಸಲು ಸಮನ್ವಯತೆಯನ್ನು ಸಾಧಿಸುವುದು.

**(ಕ್ರಮಕೈಗೊಳ್ಳಬೇಕಾದವರು: ಡಿ.ಡಿ.ಪಿ.ಐ(ಆಡಳಿತ)/ಡಿ.ವೈ.ಪಿ.ಸಿ/ಬಿ.ಇ.ಓ)**

2. **ಕೆ.ಜಿ.ಬಿ.ವಿಗಳಲ್ಲಿ ವಿದ್ಯಾರ್ಥಿನಿಯರದಾಖಲಾತಿ ನಿಯಮಗಳಿಗೆ ಸಂಬಂಧಿಸಿದಂತೆ ಕ್ರಮಗಳು**

ರಾಷ್ಟ್ರೀಯ ಮೌಲ್ಯಮಾಪನತಂಡದ ವರದಿಯಂತೆ ಬಹುತೇಕ ಕೆ.ಜಿ.ಬಿ.ವಿಗಳಲ್ಲಿ ದಾಖಲಾತಿ ನಿಯಮಗಳನ್ನು ಪಾಲಿಸಿ ವಿದ್ಯಾರ್ಥಿನಿಯರನ್ನುದಾಖಲಾತಿ ಮಾಡಿಕೊಂಡಿರುವುದಿಲ್ಲವೆಂದು ವರದಿಸಿರುತ್ತಾರೆ.ದಾಖಲಾತಿಯ ನಿಯಮಗಳಿಗೆ ವಿರುದ್ಧವಾಗಿನಿರಂತರವಾಗಿಶಾಲೆಗೆ ಹೋಗುವ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದು ನಿಯಮಗಳ ಉಲ್ಲಂಘನೆಯಾಗಿರುವುದಲ್ಲದೆ, ನಿಜವಾಗಿ ಶಾಲೆಯಿಂದ ಹೊರಗುಳಿದ, ನಿರ್ಗತಿಕ, ಸೌಲಭ್ಯವಂಚಿತ ಬಡತನರೇಖೆಗಿಂತ ಕೆಳಗಿರುವ ಕುಟುಂಬದಮಕ್ಕಳಿಗೆ ಅವಕಾಶಗಳನ್ನು ನಿರಾಕರಿಸಿದಂತಾಗುತ್ತದೆ.ಆದ್ದರಿಂದ 2014–15ನೇ ವರ್ಷಕ್ಕೆ ಈಗಾಗಲೇ ಡಿಸೆಂಬರ್ 2013 ಮತ್ತುಜನವರಿ 2014ರಲ್ಲಿ

ನಡೆದಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯಆಧಾರದ ಮೇಲೆ ಗುರುತಿಸಲಾಗಿರುವ ಶಾಲೆಯಿಂದ ಹೊರಗುಳಿದ ಅರ್ಹಹೆಣ್ಣುಮಕ್ಕಳನ್ನು ಕೆ.ಜಿ.ಬಿ.ವಿ ಶಾಲೆಗಳಿಗೆ ದಾಖಲಿಸಿ, ವಿಶೇಷ ತರಬೇತಿಯನ್ನುನೀಡಿಅವರನ್ನು ಸಂಬಂಧಿಸಿದ ತರಗತಿಗೆಕಡ್ಡಾಯವಾಗಿದಾಖಲಿಸುವುದು.ಈ ಬಗ್ಗೆ ಈಗಿನಿಂದಲೇಅಗತ್ಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವುದು.

- ಸಮೀಕ್ಷೆಯಲ್ಲಿಗುರುತಿಸಲ್ಪಟ್ಟ ವಿದ್ಯಾರ್ಥಿನಿಯರತಂದೆ/ತಾಯಿ/ಪೋಷಕರನ್ನು ಭೇಟಿ ಮಾಡಿಕೆ.ಜಿ.ಬಿ.ವಿ ಶಾಲೆಗಳ ಸೌಲಭ್ಯಗಳ ಬಗ್ಗೆ ವಿವರಿಸಿ ಮನಃಪರಿವರ್ತಿಸಿ ಕೆ.ಜಿ.ಬಿ.ವಿ ಶಾಲೆಗೆ ದಾಖಲಿಸುವುದು.
- ಇಂತಹಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿಗಾಗಿಕ್ಲಸ್ಟರ್/ಬ್ಲಾಕ್/ಜಿಲ್ಲಾ ಮಟ್ಟದಲ್ಲಿ ವಿಶೇಷ ಕಾರ್ಯಕ್ರಮಗಳನ್ನು / ಆಂದೋಲನಗಳನ್ನು /ಸಮುದಾಯಜಾಗೃತಿ ಶಿಬಿರಗಳನ್ನು, ಎನ್.ಜಿ.ಓಗಳ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳುವುದು.
- ಕೆ.ಜಿ.ಬಿ.ವಿ ದಾಖಲಾತಿ ನಿಯಮಗಳ ಬಗ್ಗೆ ಮುಖ್ಯ ಶಿಕ್ಷಕರಿಗೆ ಅಗತ್ಯಅರಿವು ಮೂಡಿಸಲುಜಿಲ್ಲಾ ಹಂತದಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸುವುದು.
- **ವಿಕಲಚೇತನ ಮಕ್ಕಳದಾಖಲಾತಿ:**ಕೆ.ಜಿ.ಬಿ.ವಿ ವಸತಿ ಶಾಲೆಗಳ ದಾಖಲಾತಿ ಗಮನಿಸಿದಲ್ಲಿ ವಿಕಲಚೇತನ ಮಕ್ಕಳ ದಾಖಲಾತಿತೀರಾಕಡಿಮೆ ಪ್ರಮಾಣದಲ್ಲಿರುವುದುಕಂಡುಬಂದಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ (2014–15) ಇಂತಹಅರ್ಹ ಮಕ್ಕಳನ್ನು ಗುರುತಿಸಿ ದಾಖಲಾತಿಯನ್ನು ಹೆಚ್ಚಿಸುವುದು.
- **ಅಲ್ಪಸಂಖ್ಯಾತ ವಿದ್ಯಾರ್ಥಿನಿಯರದಾಖಲಾತಿ:** ಕೆ.ಜಿ.ಬಿ.ವಿಗಳನ್ನುಅಲ್ಪಸಂಖ್ಯಾತ ವಿದ್ಯಾರ್ಥಿನಿಯರಅದರಲ್ಲೂ ಮುಸ್ಲಿಂ ಜನಸಮುದಾಯದ ವಿದ್ಯಾರ್ಥಿನಿಯರದಾಖಲಾತಿತೀರಕಡಿಮೆ ಪ್ರಮಾಣದಲ್ಲಿರುತ್ತದೆ. ಈ ಬಗ್ಗೆ ವಿಶೇಷ ಕಾಳಜಿವಹಿಸಿ ಮುಸ್ಲಿಂ ಜನಸಮುದಾಯ ಸೇರಿದಂತೆ, ಅಲ್ಪಸಂಖ್ಯಾತಜನಸಮುದಾಯ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಅವಕಾಶ ನೀಡುವುದು.

**(ಕ್ರಮಕೈಗೊಳ್ಳಬೇಕಾದವರು: ಡಿ.ಡಿ.ಪಿ.ಐ(ಆಡಳಿತ)/ಡಿ.ವೈ.ಪಿ.ಸಿ/ಬಿ.ಇ.ಓ)**

3. **ಕೆ.ಜಿ.ಬಿ.ವಿ ಶಿಕ್ಷಕರತರಬೇತಿ**

- ಕೆ.ಜಿ.ಬಿ.ವಿಯಲ್ಲಿಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಾಮರ್ಥ್ಯಅಭಿವೃದ್ಧಿಯತರಬೇತಿಯ ಪೂರ್ಣಜವಾಬ್ದಾರಿ ಸಂಬಂಧಿಸಿದ ಡಯಟ್, ಬಿ.ಆರ್.ಸಿ ಮತ್ತು ಸಿ.ಆರ್.ಸಿಗಳದಾಗಿರುತ್ತದೆ. ಇಲಾಖೆಯಿಂದ ನೀಡುವಎಲ್ಲಾ ತರಬೇತಿಗಳನ್ನು ಕೆ.ಜಿ.ಬಿ.ವಿ ಶಿಕ್ಷಕರಿಗೆ ನೀಡುವುದು. ಸಿ.ಸಿ.ಇ ತರಬೇತಿ ಬಗ್ಗೆ ಅಧ್ಯಯನ ವರದಿಯಲ್ಲಿ ಪ್ರಸ್ತಾಪಿಸಿದ್ದು, ಸಿ.ಸಿ.ಇ ಮೌಲ್ಯಮಾಪನದ ಪ್ರಮುಖಉದ್ದೇಶಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅವರ ಸಾಮರ್ಥ್ಯದಆಧಾರದ ಮೇಲೆ ಕಲಿಯಲು ಸಹಾಯ/ಸಹಕಾರ ನೀಡುವುದಾಗಿರುತ್ತದೆಎಂದು ವರದಿಸಿರುತ್ತಾರೆ. ಈ ಹಿನ್ನೆಲೆಯಲ್ಲಿಎಲ್ಲಾ ಡಯಟ್‌ಗಳ ಮೂಲಕ ಫೆಬ್ರವರಿ 2014ರ ಒಳಗಾಗಿ ಕೆ.ಜಿ.ಬಿ.ವಿ ಶಿಕ್ಷಕರಿಗೆ ಪರಿಣಾಮಕಾರಿಯಾಗಿ ಸಿ.ಸಿ.ಇ ತರಬೇತಿ ಹಮ್ಮಿಕೊಳ್ಳುವುದು ಹಾಗೂ ಕೆ.ಜಿ.ಬಿ.ವಿ ಶಾಲೆಗಳ ಸ್ಥಾಪನೆ ಉದ್ದೇಶ, ನಿಯಮಗಳ ಬಗ್ಗೆ ಅರಿವು ಮೂಡಿಸಲು ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಳ್ಳುವುದು. ಈ ಸಂಬಂಧ ಈಗಾಗಲೆ ವಿನ್ಯಾಸಗೊಳಿಸಿರುವ (ಬಿಂಬ ಮತ್ತುಕೆ.ಜಿ.ಬಿ.ವಿ ಕೈಪಿಡಿ) ಸಾಹಿತ್ಯವನ್ನು ಉಪಯೋಗಿಸಿಕೊಳ್ಳುವುದು ಹಾಗೂ ಮಹಿಳಾ ಸಮಾಖ್ಯವತಿಯಿಂದ ಲಭ್ಯವಿರುವತರಬೇತಿ ಸಾಹಿತ್ಯ ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳವುದು.

**(ಕ್ರಮಕೈಗೊಳ್ಳಬೇಕಾದವರು: ನಿರ್ದೇಶಕರು,ಡಿ.ಎಸ್.ಇ.ಆರ್.ಟಿ / ಡಯಟ್ ಪ್ರಾಂಶುಪಾಲರು)**

4. ಮಹಿಳಾ ಸಮಖ್ಯಾ ಮತ್ತುಎಸ್.ಎಸ್.ಎ ಇಲಾಖೆಗಳು ಜತೆಗೂಡಿ ಕೆಲಸ ಮಾಡುವ ಹಾಗೂ ಸಹಕಾರ ಸಂಬಂಧಗಳನ್ನು ಹೆಚ್ಚಿಸುವಅಗತ್ಯವಿರುತ್ತದೆಎಂದು ವರದಿಯಲ್ಲಿ ತಿಳಿಸಿರುತ್ತಾರೆ. ಅದರಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

   - ಪ್ರತಿ ತಿಂಗಳು ತಿಂಗಳ ಮೊದಲ ವಾರದಲ್ಲಿರಾಜ್ಯ ಹಂತದಲ್ಲಿಎಸ್.ಎಸ್.ಎ ಮತ್ತು ಮಹಿಳಾ ಸಮಖ್ಯಾ ಅಧಿಕಾರಿಗಳ ಸಭೆಯನ್ನು ನಡೆಸಲಾಗುವುದು.
   - ಜಿಲ್ಲಾ/ಬ್ಲಾಕ್ ಹಂತಗಳಲ್ಲಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು(ತರಬೇತಿ) / ಬಿ.ಇ.ಓ/ ಮಹಿಳಾ ಸಮಖ್ಯಾ ಸಿಬ್ಬಂದಿಯೊಂದಿಗೆ ಹಾಗೂ ಮುಖ್ಯ ಶಿಕ್ಷಕರೊಂದಿಗೆ ಪ್ರತಿ ತಿಂಗಳ ಕೊನೆಯ ವಾರದಲ್ಲಿಕಡ್ಡಾಯವಾಗಿ ಸಭೆಗಳನ್ನು ನಡೆಸಿ ಉತ್ತಮ ಅಂಶಗಳನ್ನು (Best Practices)

ಚರ್ಚಿಸಿ ವಿನಿಮಯ ಮಾಡಿಕೊಳ್ಳುವುದು. ಸಭಾ ನಡವಳಿಯನ್ನು ಎಸ್.ಎಸ್.ಎಕಚೇರಿಗೆ ಸಲ್ಲಿಸುವುದುಹಾಗೂ ಎಸ್.ಎಸ್.ಎ ನಿರ್ವಹನೆ ಮತ್ತುಎಂ.ಎಸ್.ಕೆ ನಿರ್ವಹಣೆ ಕೆ.ಜಿ.ಬಿ.ವಿಗಳಿಗೆ exposure visit ಗಳನ್ನು ಏರ್ಪಡಿಸುವುದು.

**(ಕ್ರಮಕೈಗೊಳ್ಳಬೇಕಾದವರು: ಡಿ.ಡಿ.ಪಿ.ಐ(ಆಡಳಿತ)/ಬಿ.ಇ.ಓ/ಮಹಿಳಾ ಸಮಖ್ಯಾ)**

5. ಕೆ.ಜಿ.ಬಿ.ವಿ.ಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳುವ ಬಗ್ಗೆ
   - ಮೌಲ್ಯಮಾಪನ ವರದಿಯಲ್ಲಿಕೆ.ಜಿ.ಬಿ.ವಿಗಳಲ್ಲಿ ಶಿಕ್ಷಕರ ಹುದ್ದೆಗಳು (ವಿಶೇಷವಾಗಿ ವಿಜ್ಞಾನ ಮತ್ತುಗಣಿತ ಹುದ್ದೆಗಳು) ಖಾಲಿ ಇರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಇದರಿಂದ ಶೈಕ್ಷಣಿಕಗುಣಮಟ್ಟದ ಬಗ್ಗೆ ಪ್ರಭಾವ ಬೀರುವುದರಿಂದ ಕೆ.ಜಿ.ಬಿ.ವಿಗಳಲ್ಲಿ ಖಾಲಿ ಇರುವಇಲಾಖೆಯಿಂದಭರ್ತಿ ಮಾಡುವ ಶಿಕ್ಷಕರನ್ನು ನಿಯಮಾನುಸಾರತುಂಬುವುದು.
   - 2014–15ನೇ ಸಾಲಿಗೆ ಸಂಬಂಧಿಸಿದಂತೆ ಖಾಲಿ ಇರುವ ವಿಶೇಷವಾಗಿ ಪಿ.ಸಿ.ಎಂ ಶಿಕ್ಷಕರನ್ನು ನಿಯೋಜನೆ ಮೇಲೆ ತುಂಬುವುದು. ಸಾಧ್ಯವಾಗದೆಇದ್ದಲ್ಲಿ ಹೊರಗುತ್ತಿಗೆಏಜೆನ್ಸಿ ಮೂಲಕ ಸದರಿ ಶಿಕ್ಷಕರನ್ನು ಪಡೆಯುವುದು.

**(ಕ್ರಮಕೈಗೊಳ್ಳಬೇಕಾದವರು: ಡಿ.ಡಿ.ಪಿ.ಐ(ಆಡಳಿತ)/ಬಿ.ಇ.ಓ)**

6. ಕೆ.ಜಿ.ಬಿ.ವಿಗಳಲ್ಲಿ ಕಡ್ಡಾಯವಾಗಿ ಮಹಿಳಾ ಬೋಧನಾ ಮತ್ತು ಬೋಧನೇತರ ಸಿಬ್ಬಂದಿಯನ್ನು ಮಾತ್ರನೇಮಿಸಿಕೊಳ್ಳುವುದು. (except watchman)
7. ಕೆ.ಜಿ.ಬಿ.ವಿ ಶಾಲೆಗಳಲ್ಲಿ ಆರ್.ಟಿ.ಇ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು
8. ಯಾವುದೇ ಪುರುಷ ಅಭ್ಯರ್ಥಿಗಳು ವಾಚ್‌ಮನ್ ಸೇರಿದಂತೆ ವಿದ್ಯಾರ್ಥಿನಿಲಯದ ಒಳಗೆ ವಾಸ್ತವ್ಯ ಹೂಡಲು ಅವಕಾಶ ನೀಡಬಾರದು.
9. ಆಹಾರಕ್ಕೆ ನಿಗದಿಪಡಿಸಿರುವ ಘಟಕ ವೆಚ್ಚವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ವಿದ್ಯಾರ್ಥಿನಿಯರಿಗೆ ಪೌಷ್ಠಿಕಾಂಶಯುಕ್ತಉತ್ತಮಆಹಾರವನ್ನುಒದಗಿಸುವುದು.
10. ಕೆ.ಜಿ.ಬಿ.ವಿಗಳಲ್ಲಿ ವ್ಯಾಸಂಗ ಮಾಡಿದಎಲ್ಲಾ 8ನೇ ತರಗತಿ ವಿದ್ಯಾರ್ಥಿನಿಯರನ್ನು ಮುಂದಿನ 9ನೇ ತರಗತಿಗೆ ದಾಖಲಿಸಿ ಅವರ ವಿದ್ಯಾಭ್ಯಾಸವನ್ನು ಮುಂದುವರೆಸುವಂತೆ ಕ್ರಮಕೈಗೊಳ್ಳುವುದು. ಈ ಸಂಬಂಧಆರ್.ಎಂ.ಎಸ್.ಎ ವಿದ್ಯಾರ್ಥಿನಿಲಯಗಳು ಹಾಗೂ ಕೆ.ಕೆ.ಜಿ.ಬಿ.ವಿಗಳಲ್ಲಿ ಪ್ರವೇಶವಕಾಶವನ್ನುಕಲ್ಪಿಸುವುದು.

ಸಹಿ/–
**ರಾಜ್ಯಯೋಜನಾನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**ಅಗತ್ಯಕ್ರಮಕ್ಕಾಗಿ,**
1. ಸಂಬಂಧಿಸಿದ ಜಿಲ್ಲೆಗಳಉಪನಿರ್ದೇಶಕರು(ಆ) ಮತ್ತು ಡಿವೈಪಿಸಿ ರವರಅಗತ್ಯಕ್ರಮಕ್ಕಾಗಿ.
2. ಉಪನಿರ್ದೇಶಕರು(ಆಡಳಿತ)/ಡಿವೈಪಿಸಿ ಮೂಲಕ ಬಿ.ಇ.ಓ., ಬಿ.ಆರ್.ಸಿ ಮತ್ತುಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರುಗಳಿಗೆ.
3. ಪ್ರಾಂಶುಪಾಲರು, ಎಲ್ಲಾ ಡಯಟ್‌ಗಳಿಗೆ ಅಗತ್ಯಕ್ರಮಕ್ಕಾಗಿ
4. ರಾಜ್ಯಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, ನಂ. 367, 11ನೇ ಕ್ರಾಸ್, 2ನೇ ಬ್ಲಾಕ್, 4ನೇ ಮೇನ್, ಆರ್.ಟಿ.ನಗರ, ಬೆಂಗಳೂರು ರವರಅಗತ್ಯಕ್ರಮಕ್ಕಾಗಿ.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆಅಗತ್ಯಕ್ರಮಕ್ಕಾಗಿ

**ಮಾಹಿತಿಗಾಗಿ,**
1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ
2. ಮಾನ್ಯಆಯುಕ್ತರು, ಸಾ.ಶಿ.ಇ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ರವರಿಗೆ ಅನುಪಾಲನೆಗಾಗಿ ಕೋರುತ್ತಾ
4. ಕಛೇರಿ ಪ್ರತಿ.